"ನೀರನ್ನು ಮಿತವಾಗಿ ಬಳಸಿ"
"ಕನ್ನಡದಲ್ಲೇ ವ್ಯವಹರಿಸಿ"

Fax : 080-22945102
Phone : 22945386
www.bwssb.gov.in

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

## BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560 009.

ಸಂಖ್ಯೆ : ಬೆಂಜಮಂ
No : BWSSB ]ಮುಆಅ–ಕಾ/397–31–2012/4628/2017–18

ದಿನಾಂಕ
Date ] 25.01.18

## ಜ್ಞಾಪನಾ ಪತ್ರ

ವಿಷಯ: ನೇರ ನೇಮಕಾತಿ–2015ಕ್ಕೆ ಸಂಬಂಧಿಸಿದಂತೆ ವಿವಿಧ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಗೊಂಡಿರುವ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸುವ ಬಗ್ಗೆ.

ಉಲ್ಲೇಖ:
1. ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/397-31-12/4226/2014-15 ದಿನಾಂಕ: 23.2.2015.
2. ಸಹಾಯಕ ಅಭಿಯಂತರ(ಎಲೆಕ್ಟ್ರಿಕಲ್) ಹುದ್ದೆಯ ಅಂತಿಮ ಆಯ್ಕೆಪಟ್ಟಿಯ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/20-32-2015/3656/2015–16 ದಿನಾಂಕ: 21.1.2016.
3. ಕಿರಿಯ ಅಭಿಯಂತರ(ಎಲೆಕ್ಟ್ರಿಕಲ್) ಹುದ್ದೆಯ ಅಂತಿಮ ಆಯ್ಕೆಪಟ್ಟಿಯ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/21-32-2015/3353/2015–16 ದಿನಾಂಕ: 31.12.2015.
4. ಸಹಾಯಕ ಹುದ್ದೆಯ ಅಂತಿಮ ಆಯ್ಕೆಪಟ್ಟಿಯ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/28-32-2015/3658/2015–16 ದಿನಾಂಕ: 21.1.2016.
5. ಕಿರಿಯ ಸಹಾಯಕ ಹುದ್ದೆಯ ಅಂತಿಮ ಆಯ್ಕೆಪಟ್ಟಿಯ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/43-32-2015/3659/2015–16 ದಿನಾಂಕ: 21.1.2016.
6. ಮಾಪನ ಓದುಗ ಹುದ್ದೆಯ ಪರಿಷ್ಕೃತ ಅಂತಿಮ ಆಯ್ಕೆಪಟ್ಟಿಯ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/46-32-2015/3687/2015–16 ದಿನಾಂಕ: 23.1.2016.
7. ಬೆರಳಚ್ಚುಗಾರ ಯಾ ಡಿಇಒ ಹುದ್ದೆಯ ಅಂತಿಮ ಆಯ್ಕೆಪಟ್ಟಿಯ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/45-32-2015/3356/2015-16 ದಿನಾಂಕ: 31.12.2015.
8. ಪ್ರಯೋಗಾಲಯ ಸಹಾಯಕ ದರ್ಜೆ–II ಹುದ್ದೆಯ ಅಂತಿಮ ಆಯ್ಕೆಪಟ್ಟಿಯ ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/26-32-2015/3358/15–16 ದಿನಾಂಕ: 31.12.2015.
9. ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಂಡಳಿಯ ಸೇವೆಗೆ ಸೇರಲು ಜಾರಿಯಾದ ಅಂತಿಮ ಕರೆ ಪತ್ರ ದಿನಾಂಕ: 25.9.2017.
10. ಮಾನ್ಯ ಅಧ್ಯಕ್ಷ ರವರು ದಿನಾಂಕ: 08.01.2018 ರಂದು ನೀಡಿರುವ ಅನುಮೋದನೆ.

* * * * *

**ಪೀಠಿಕೆ:**

ಮಂಡಳಿಯಲ್ಲಿ ವಿವಿಧ ಹುದ್ದೆಗಳ ನೇರ ನೇಮಕಾತಿ ಸಂಬಂಧ ಉಲ್ಲೇಖ (1)ರಲ್ಲಿ ಹೊರಡಿಸಲಾಗಿರುವ ಅಧಿಸೂಚನೆಗೆ ಅನುಗುಣವಾಗಿ ಉಲ್ಲೇಖ(2) ರಿಂದ (8)ರಲ್ಲಿ ತಿಳಿಸಲಾಗಿರುವ ಅಧಿಸೂಚನೆಯಲ್ಲಿ ವಿವಿಧ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ವಿರುದ್ಧ ಸ್ವೀಕೃತಗೊಳ್ಳುವ ಜಾತಿ ಸಿಂಧುತ್ವ ಪ್ರಮಾಣ ಪತ್ರ ಮತ್ತು ಪೊಲೀಸ್ ವರದಿಯ ಆಧಾರದ

ಮೇಲೆ ನೇಮಕಾತಿ ಆದೇಶ ಜಾರಿಗೊಳಿಸಲಾಗಿರುತ್ತದೆ. ನೇಮಕಾತಿ ಆದೇಶ ಜಾರಿಗೊಳಿಸಲಾದ ಅಭ್ಯರ್ಥಿಗಳು ನೇಮಕಾತಿ ಆದೇಶ ಸ್ವೀಕರಿಸಿದ ದಿನಾಂಕದಿಂದ 15 ದಿನಗಳ ಒಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕೆಂದು ತಪ್ಪಿದ್ದಲ್ಲಿ ನೇಮಕಾತಿಯು ಒಪ್ಪಿಗೆಯಿಲ್ಲವೆಂದು ಪರಿಭಾವಿಸಿ, ನೇಮಕಾತಿ ಆದೇಶವನ್ನು ಯಾವುದೇ ಸೂಚನೆ ನೀಡದೆ ರದ್ದುಪಡಿಸಲಾಗುವುದು ಎಂದು ತಿಳಿಸಲಾಗಿರುತ್ತದೆ.

ಆದರೆ, ನೇಮಕಾತಿ ಆದೇಶ ಜಾರಿಯಾಗಿರುವ ಅಭ್ಯರ್ಥಿಗಳಲ್ಲಿ ಕೆಲವು ಅಭ್ಯರ್ಥಿಗಳು ನಿಗದಿತ ಅವಧಿಯಲ್ಲಿ ಮಂಡಳಿಗೆ ಸೇವೆಗೆ ಸೇರಲು ಇಚ್ಛೆ ಇರುವುದಾಗಿ ಯಾವುದೇ ಒಪ್ಪಿಗೆ ಪತ್ರವಾಗಲೀ ಅಥವಾ ಮಂಡಳಿಯ ಸೇವೆಗೆ ಸೇರದಿರುವ ಕುರಿತು ಯಾವುದೇ ಲಿಖಿತ ಮನವಿಯನ್ನು ಸಲ್ಲಿಸಿರುವುದಿಲ್ಲ.

ಮುಂದುವರೆದು, ಅಂತಿಮ ಆಯ್ಕೆಪಟ್ಟಿಯಲ್ಲಿ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ವರದಿಯನ್ನು ಕೋರಲಾಗಿ, ಸಿಂಧುತ್ವ ವರದಿಯನ್ನು ಕೋರಿರುವ ಅಭ್ಯರ್ಥಿಗಳಿಗೆ ಮೂಲ ದಾಖಲಾತಿಗಳನ್ನು ಸಲ್ಲಿಸುವಂತೆ ಸಕ್ಷಮ ಪ್ರಾಧಿಕಾರದವರು ಪತ್ರ ರವಾನಿಸಲಾಗಿ ಅಭ್ಯರ್ಥಿಗಳು ಯಾವುದೇ ತರಹ ಸ್ಪಂದಿಸಿರುವುದಿಲ್ಲ ಎಂದು ಮಂಡಳಿಗೆ ತಿಳಿಸಿರುತ್ತಾರೆ ಹಾಗೂ ಪೊಲೀಸ್ ಪರಿಶೀಲನಾ ವರದಿಯ ಕುರಿತು ಅಭ್ಯರ್ಥಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸಿರುವುದಿಲ್ಲ ಎಂದು ಪೊಲೀಸ್ ಇಲಾಖೆಯವರು ತಿಳಿಸಿರುತ್ತಾರೆ.

ಆದಾಗ್ಯೂ 'ಸಹಜ ನ್ಯಾಯ ಪರಿಪಾಲನೆ' ಮಾಡುವ ದೃಷ್ಟಿಯಿಂದ ನೇಮಕಾತಿ ಆದೇಶ ಜಾರಿಯಾಗಿದ್ದರೂ ಮಂಡಳಿಯ ಸೇವೆಗೆ ಸೇರುವ ಕುರಿತು ಯಾವುದೇ ತರಹದ ಸಮ್ಮತಿಯನ್ನು ಸೂಚಿಸದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡುವ ನಿಟ್ಟಿನಲ್ಲಿ ಉಲ್ಲೇಖ (9)ರಲ್ಲಿ ಅಭ್ಯರ್ಥಿಗಳಿಗೆ ಅಂತಿಮ ತಿಳುವಳಿಕೆ ಪತ್ರಗಳನ್ನು ಜಾರಿಗೊಳಿಸಿ, ಅಭ್ಯರ್ಥಿಗಳ ವಿರುದ್ಧ ಸ್ವೀಕೃತಗೊಳ್ಳುವ ಜಾತಿ ಸಿಂಧುತ್ವ/ಪೊಲೀಸ್ ವರದಿಯನ್ನು ಕಾಯ್ದಿರಿಸಿ ದಿನಾಂಕ: 31.10.2017ರೊಳಗೆ ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ, 1ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಜಲಮಂಡಳಿ ಇವರ ಮುಂದೆ ಹಾಜರಾಗಿ ಮಂಡಳಿಯ ಸೇವೆಗೆ ಸೇರ್ಪಡೆಗೊಳ್ಳುವ ಕುರಿತು ಒಪ್ಪಿಗೆ ಸೂಚಿಸಿ ನೇಮಕಾತಿ ಆದೇಶವನ್ನು ಪಡೆದುಕೊಳ್ಳುವಂತೆ ಸೂಚಿಸಲಾಗಿರುತ್ತದೆ. ಒಂದು ವೇಳೆ ಮಂಡಳಿಯ ಸೇವೆಗೆ ಸೇರಲು ಇಚ್ಛೆ ಇಲ್ಲದಿದ್ದಲ್ಲಿ ದಿನಾಂಕ: 31.10.2017ರ ಒಳಗೆ ಲಿಖಿತ ರೂಪದಲ್ಲಿ ಅಭಿಪ್ರಾಯ ತಿಳಿಸಲು ಹಾಗೂ ನಿಗದಿತ ಅವಧಿಯೊಳಗೆ ಸಕ್ಷಮ ಪ್ರಾಧಿಕಾರದ ಮುಂದೆ ಹಾಜರಾಗದಿದ್ದಲ್ಲಿ ಅಥವಾ ಯಾವುದೇ ಅಭಿಪ್ರಾಯ ಸಲ್ಲಿಸದಿದ್ದಲ್ಲಿ ಮಂಡಳಿಯ ಸೇವೆಗೆ ಇಚ್ಛೆ ಇರುವುದಿಲ್ಲ ಎಂದು ಪರಿಭಾವಿಸಿ ಅಭ್ಯರ್ಥಿತ್ವವನ್ನು ರದ್ದುಪಡಿಸಿ, ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಸೂಚಿಸಲಾಗಿರುತ್ತದೆ.

ಉಲ್ಲೇಖ (9)ರಲ್ಲಿನ ಅಂತಿಮ ತಿಳುವಳಿಕೆ ಪತ್ರಕ್ಕೆ ಅನುಗುಣವಾಗಿ ಕೆಲವು ಅಭ್ಯರ್ಥಿಗಳು ಮಂಡಳಿಯ ಸೇವೆಗೆ ಸೇರಲು ಇಚ್ಛೆ ಇರುವುದಿಲ್ಲವೆಂದು ಲಿಖಿತವಾಗಿ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ ಹಾಗೂ ಇನ್ನುಳಿದ ಅಭ್ಯರ್ಥಿಗಳು ಯಾವುದೇ ರೀತಿಯಲ್ಲಿ ಪ್ರತಿಕ್ರಿಯೆ/ಅಭಿಪ್ರಾಯವನ್ನು ಮಂಡಳಿಗೆ ಸಲ್ಲಿಸಿರುವುದಿಲ್ಲ.

ಆದ್ದರಿಂದ ಮೇಲ್ಕಂಡ ಎಲ್ಲಾ ಅಂಶಗಳನ್ವಯ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ:**

ಮಂಡಳಿಯ ಅಧ್ಯಕ್ಷರು ಹಾಗೂ ನೇಮಕಾತಿ ಪ್ರಾಧಿಕಾರಿಯವರು ದಿನಾಂಕ: 08.01.2018ರಲ್ಲಿ ಆದೇಶಿಸಿರುವಂತೆ ಮಂಡಳಿಯ ನೇರ ನೇಮಕಾತಿ ಅಧಿಸೂಚನೆ ದಿನಾಂಕ: 23.2.2015ಕ್ಕೆ ಸಂಬಂಧಿಸಿದಂತೆ ಉಲ್ಲೇಖ(2) ರಿಂದ (8) ರಲ್ಲಿರುವಂತೆ ಅಧಿಸೂಚಿಸಿರುವ ವಿವಿಧ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಈ ಕೆಳಕಂಡ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಪಡಿಸಿ ಆದೇಶಿಸಿದೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು ಶ್ರೀ/ಶ್ರೀಮತಿ | ಹುದ್ದೆ | ಆಯ್ಕೆಯಾಗಿರುವ ಮೀಸಲು ಬಿಂದು |
|---|---|---|---|
| 1. | ನೂರ್ ಜೀಬಾ ಬಿನ್ ಮುಜೀಬ್ ಅಹಮ್ಮದ್ | ಸಹಾಯಕ ಅಭಿಯಂತರ (ಎಲೆಕ್ಟ್ರಿಕಲ್) | 2B(W) |
| 2. | ನಟೇಶ್ ಮಂಜಪ್ಪ ಎಚ್ ಬಿನ್ ಮಂಜಪ್ಪ ಎಸ್.ಬಿ. | ಕಿರಿಯ ಅಭಿಯಂತರ (ಎಲೆಕ್ಟ್ರಿಕಲ್) | GM(R) |
| 3. | ಚೇತನ್ ಜೈನ್ ಎಚ್.ಎ ಬಿನ್ ಅನಂತರಾಜು ಟಿ.ವಿ. | ಕಿರಿಯ ಅಭಿಯಂತರ (ಎಲೆಕ್ಟ್ರಿಕಲ್) | 3B(O) |
| 4. | ಮಹೇಶ್ ಸೋಲಾಪೂರ ಬಿನ್ ಶೇಖಪ್ಪ | ಕಿರಿಯ ಅಭಿಯಂತರ (ಎಲೆಕ್ಟ್ರಿಕಲ್) | 2A(PH) |
| 5. | ಕಲ್ಪನಾ ಬಸಪ್ಪ ಸಂಗಳ ಬಿನ್ ಬಸಪ್ಪ | ಕಿರಿಯ ಅಭಿಯಂತರ (ಎಲೆಕ್ಟ್ರಿಕಲ್) | 2A(W) |
| 6. | ಬಸವರಾಜು ಕೋಟೆಪ್ಪ ಬಮ್ಮನ ಕಟ್ಟಿ ಬಿನ್ ಕೋಟೆಪ್ಪ | ಕಿರಿಯ ಅಭಿಯಂತರ (ಎಲೆಕ್ಟ್ರಿಕಲ್) | 2A(R) |
| 7. | ಚಂದ್ರಕಾಂತ ಬಿನ್ ನೀಲಕಂಠ ಬಬಲಾದಕರ | ಸಹಾಯಕ | SC(O) |
| 8. | ನಾಗಮಲ್ಲೇಶ್ವರ ರೆಡ್ಡಿ ಕೆ ಬಿನ್ ಪುಲಾರೆಡ್ಡಿ ಕಾರ್ನಾಟಿ | ಕಿರಿಯ ಸಹಾಯಕ | GM(O) |
| 9. | ಅಶ್ವಿನಿ ಹೆಚ್.ಪಿ. ಬಿನ್ ಪ್ರಕಾಶ್ ಎಚ್.ಎಂ. | ಕಿರಿಯ ಸಹಾಯಕ | GM(W) |
| 10. | ನಿತೀನ್ ಕುಮಾರ್ ಎನ್ ಬಿನ್ ನಾರಾಯಣಸ್ವಾಮಿ ಸಿ. | ಕಿರಿಯ ಸಹಾಯಕ | 2A(O) |
| 11. | ಪ್ರತಿಭಾ ಎನ್ ಬಿನ್ ನಿಜಲಿಂಗಪ್ಪ ಸಿ. | ಕಿರಿಯ ಸಹಾಯಕ | CAT-1(W) |
| 12. | ನಾಗೇಂದ್ರ ಜಿ ಬಿನ್ ಗಂಗಪ್ಪ | ಕಿರಿಯ ಸಹಾಯಕ | SC(R) |
| 13. | ಅರುಣ ಸಿ ಬಿನ್ ಚಂದ್ರನಾಯ್ಕ | ಕಿರಿಯ ಸಹಾಯಕ | SC(R) |
| 14. | ಮಂಜೇಗೌಡ ಹೆಚ್.ಜಿ ಬಿನ್ ಗೋಪಾಲಕೃಷ್ಣೇಗೌಡ | ಕಿರಿಯ ಸಹಾಯಕ | 2A(R) |
| 15. | ದಿವ್ಯ ಪಿ ಬಿನ್ ಪುಟ್ಟಸ್ವಾಮಿ ಎಚ್. | ಕಿರಿಯ ಸಹಾಯಕ | SC(W) |
| 16. | ನಜೀರ್ ಅಹ್ಮದ್ ಬಿನ್ ಫಕೀರ್ ಅಹ್ಮದ್ | ಕಿರಿಯ ಸಹಾಯಕ | 2B(O) |
| 17. | ಎನ್. ಸುನೀಲ್ ಬಿನ್ ನೀಲಪ್ಪ ಟಿ. | ಕಿರಿಯ ಸಹಾಯಕ | GM(O) |
| 18. | ಎಸ್. ಸಿದ್ದೇಗೌಡ ಬಿನ್ ಸಿದ್ದಲಿಂಗಪ್ಪ | ಕಿರಿಯ ಸಹಾಯಕ | GM(R) |
| 19. | ವಿ.ಸಿ. ಗಿರೀಶ್ ಬಿನ್ ಚಿನ್ನಮರಿಗೌಡ | ಕಿರಿಯ ಸಹಾಯಕ | GM(R) |
| 20. | ಬಿ. ದೀಪ ಬಿನ್ ಟಿ.ಎನ್. ಬಾಲಸುಬ್ರಮಣ್ಯನ್ | ಕಿರಿಯ ಸಹಾಯಕ | GM(W) |
| 21. | ಎಲ್. ನಂದೀಶ | ಕಿರಿಯ ಸಹಾಯಕ | 3A(R) |
| 22. | ಭರತ್ ಎಲ್ ಬಿನ್ ಲೋಕರಾಜ್ ಆರ್ | ಮಾಪನ ಓದುಗ | GM(O) |

| | | | |
|---|---|---|---|
| 23 | ಮಂಜುನಾಥ ವಿ ಬಿನ್ ವೆಂಕಟೇಶಪ್ಪ | ಮಾಪನ ಓದುಗ | GM(KM) |
| 24. | ಮಹಾಂತೇಶ ಚನ್ನಣ್ಣವರ ಬಿನ್ ಬಸವರಾಜ ಚನ್ನಣ್ಣವರ | ಮಾಪನ ಓದುಗ | GM(R) |
| 25. | ದೇವಪ್ಪ ಬಿನ್ ಗದ್ದೆಪ್ಪ | ಮಾಪನ ಓದುಗ | 2A(R) |
| 26. | ಮಹದೇವ ಎನ್.ಕೆ. ಬಿನ್ ಕುನ್ನಯ್ಯ | ಮಾಪನ ಓದುಗ | 2A(R) |
| 27. | ರಮೇಶ್ ಎಸ್ ಬಿನ್ ಸೂರ್ಯನಾಯಕ್ ಬಿ | ಮಾಪನ ಓದುಗ | SC(KM) |
| 28. | ರಾಜೇಶ್ ಎಂ ಬಿನ್ ಮುತ್ತುರಾಜು | ಬೆರಳಚ್ಚುಗಾರ-ಯಾ- ಡಿ.ಇ.ಓ | 2A(O) |
| 29. | ಸಿದ್ಧರಾಜ್ ಪೂಜಾರಿ ಬಿನ್ ಮಲ್ಲಪ್ಪ | ಪ್ರಯೋಗಾಲಯ ಸಹಾಯಕ ದರ್ಜೆ-2 | 2A(O) |

(ಮೇಲಿನ ಕೋಷ್ಟಕದಲ್ಲಿ ಕ್ರ.ಸಂ. 20ರಲ್ಲಿರುವ ಅಭ್ಯರ್ಥಿಯು ನೇಮಕಾತಿ ಆಗಿರುವ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ನಿಗದಿಪಡಿಸಲಾಗಿದ್ದ ಗಡುವನ್ನು ವಿಸ್ತರಿಸುವಂತೆ ಕೋರಿದ್ದ ಮನವಿಯನ್ನು ಮಂಡಳಿ ಸಭೆಯ ನಿರ್ಣಯದಂತೆ ತಿರಸ್ಕರಿಸಲಾಗಿರುತ್ತದೆ).

ಮೇಲ್ಕಂಡ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ಮಂಡಳಿಯು ರದ್ದುಪಡಿಸಿರುವ ಸಂಬಂಧ ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ**
**ಬೆಂಗಳೂರು ಜಲಮಂಡಳಿ**

ಪ್ರತಿಯನ್ನು ಸೂಚನಾ ಫಲಕಕ್ಕೆ/ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.